ದಿನ ಪತ್ರಿಕೆ
Reg No. M 1293
Daily & Weekly

For All Kinds of
Printing & Binding
The
Satyavadi
Press

SATYAVADI—Oldest Newspaper of Mysore

ಸತ್ಯವಾದಿ

ಸಂಪುಟ 27 ಸಂಚಿಕೆ 312] ಶುಕ್ರವಾರ 11—6—1943 [3 ಪೈ

ಅಕ್ಷರ

ಸಾಮಾಜಿಕ
ಭಾವಪರಿಪೂರ್ಣವಾದ ಕಥೆ
ಓದಲು ಪ್ರಾರಂಭಿಸಿದವರೆಗೆ ಕಥೆ ಪೂರೈಸುವ
ರೆಗೂ ಊಟಕ್ಕೆ ಕೂಡ ಏಳಲು ಮನ
ಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇ
ಜು 1 ಆಣೆ. ಮುಂಗಡ ಕಳುಹಿಸಬೇಕು
ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್ ಮೈಸೂರು

ಮಾಸ್ಕೋವಿನ ಮತ್ತಿಗೆ

ಆಂಕಾರ ಸುದ್ದಿಯಂತೆ ಹಿಟ್ಲರ್ ಮಾಸ್ಕೋ ನಗರವನ್ನು ಮುತ್ತಲು 70 ಡಿವಿಜ್ಞ್ ಅಂದರೆ ಸುಮಾರು 10 ಲಕ್ಷ ಸೈನ್ಯವನ್ನು ಜಮಾಯಿಸಿರುವನೆಂದು ತಿಳಿಯಬಂದಿದೆ.

ನಿರುದ್ಯೋಗವಿರಬಾರದು

ಬ್ರಿಟಿಷ್ ಒಳಾಡಳಿತದ ಸಚಿವರಾದ ಹರ್ಬರ್ಟ್ ಮಾರಿಸನ್‌ರವರು ನೂತನ ಜಗತ್ತು ಸರಿಯಾಗಿರಬೇಕಾದರೆ ಯಾರಿಗೂ ನಿರುದ್ಯೋಗವು ಇರಬಾರದೆಂದು ಹೇಳಿದರು.

ಂ ಂ

ಅಲ್ಲಾಬಕ್ಷರ ಹಂತಕರು

ಮಾಜಿ ಸಿಂಧ್ ಮಹಾಪ್ರಧಾನರನ್ನು ಖೂನಿಮಾಡಿದವರು ಹೂರ್ ಪಂಗಡದವರೆಂದು ಪೋಲೀಸಿನವರು ಪತ್ತೆ ಮಾಡಿರುತ್ತಾರೆ.

ಂ ಂ

ಇಟಲಿಯವರ ನಷ್ಟ

ಇಟಾಲಿಯು ರಣರಂಗಕ್ಕೆ ಇಳಿದು ನಿನ್ನೆಗೆ 3 ವರ್ಷವಾಯಿತು. ಈಗಿನವರೆಗೆ ಇಟಲಿ ನೌಕಾ ಪಡೆಗೆ ಎಫ್ಸಿಲ್ ಆಫೈರುವರೆಗೆ 2200 ಮಂದಿ ಸತ್ತರು. 14 ಸಾವಿರ ಮಂದ ಪತ್ತೆಯಿಲ್ಲ.

ಹೊಸಹೊಸ ಸುದ್ದಿ

ತುರ್ಕಿಯೂ ರಣರಂಗಕ್ಕೆ ಧುಮುಕುವಕಾಲ ಒದಗಬಹುದೆಂದು ತುರ್ಕಿ ಪ್ರೆಸಿಡೆಂಟರು ಉಹಿಸುತ್ತಾರೆ.

ಹಾಲೆಂಡಿನಲ್ಲಿದ್ದ ರಾಣಿಯು ಅವಮ ನೆಯನ್ನು ಜರ್ಮನಿಯ ವರು ಒಂದು ಆಸ್ಪತ್ರೆಗೆ ಕೊಟ್ಟಿರುವುದು.

ಆಹಮದಾಬಾದಿನಲ್ಲಿ ಇನ್ನು ಮುಂದೆ ಯಾರೂ ಒಂದು ಚೀಲಕ್ಕಿಂತ ಹೆಚ್ಚಾಗಿ ಕಲ್ಲಿಜ್ಜಲನ್ನು ಕೊಳ್ಳಬಾರದೆಂದೂ 14 ಚೀಲಕ್ಕಿಂತ ಹೆಚ್ಚಾಗಿ ಇಟ್ಟುಕೊಂಡಿರುವವರು ಹೆಚ್ಚಾದ್ದನ್ನು ಇನ್ನು 15 ದಿವಸದ ಒಳಗಾಗಿ ವಾಪಸು ಕೊಡಬೇಕೆಂದು ಸರ್ಕಾರಿ ಆಜ್ಞೆಯಾಗಿದೆ.

ಅಮೇರಿಕಾವಲ್ಲಿ ಈ ವರ್ಷ ಅಂತ್ಯದೊಳಗಾಗಿ ಯುದ್ಧೋದ್ಯಮ ಕಾರ್ಯಕ್ಕೆ 185 ಲಕ್ಷ ಸ್ತ್ರೀಯರು ಬೇಕೆಂದು ಸರ್ಕಾರಿ ಪ್ರಕಟಣೆಯಾಗಿದೆ

ಂ ಂ

ಈಗ ಮೆಡಟಿರೇನಿಯನ್ ಯುದ್ಧ ಪ್ರಾರಂಭವಾಯಿತೆನ್ನಬಹುದು.

ಂ ಂ

ಭಾರತದಲ್ಲಿ ನ್ಯಾಷನಲ್ ಸರ್ಕಾರ ಒಂದೇ ಆಹಾರ ಕಷ್ಟತಪ್ಪಿಸುವುದು ಎಂದು ಲಂಡನ್ ಸ್ಟ್ಯಾಟ್ಸ್‌ಮನ್ ಹೇಳುತ್ತದೆ.

ಂ ಂ

ಭಾರತವನ್ನು ಏನು ಹೇಳಿದ ರೀತಿಯಲ್ಲಿ ರಾಜ್ಯವಾಳಿರಿ, ದಸ್ತಾದಿಂದಲ್ಲ ಎಂದು ಒರ್ಮಿಂಗ್‌ಹ್ಯಾಮ್ ಬಿಷಪ್ ರು ಹೇಳುತ್ತಾರೆ.

ಬಟ್ಟೆಯ ಖರೀದಿ

ಭಾರತವು ವರ್ಷಂಪ್ರತಿ 6500 ರಿಂದ 7 ಸಾವಿರ ಮಿಲಿಯ ಗಜ ಬಟ್ಟೆ ಉಪಯೋಗಿಸುವುದು ಇದರಲ್ಲಿ ಭಾರತದ ಮಿಲ್ಲುಗಳು 4 ಸಾವಿರ ಮಿಲಿಯ ಗಜ ಕೈಮಗ್ಗದಿಂದ 2 ಸಾವಿರ ಮಿಲಿಯ ಗಜ ಇಂಗ್ಲೆಂಡ್, ಜಪಾನುಗಳಿಂದ 700 ಮಿಲಿಯ ಗಜ ಬರುತ್ತಿತ್ತು. ಆಮದಾಗುವುದು ನಿಂತಿತು. ಭಾರತ ಮಿಲ್ಲುಗಳು 6600 ಮಿಲಿಯ ಗಜ ಮಾತ್ರ ತಯಾರು ಮಾಡುವುದು. ಕೈಮಗ್ಗದವರಿಗೆ ನೂಲಿಲ್ಲ ನೇಯುವುದು ನಿಂತಿತು.

ಮಿಲ್ ತಯಾರಿಕೆಯಲ್ಲಿ ಶೇಕಡ 30 ರಷ್ಟು ಮಿಲಟರಿಯವರಿಗೆ ಮಾಸಲಾಗಿದೆ. ಸ್ವಲ್ಪ ಪರದೇಶಕ್ಕೂ ರವಾನೆಯಾಗುತ್ತಿದೆ. ಮಿಲಟರಿಯವರಿಗೆ ಕೊಟ್ಟು ರಫ್ತುನಾಡಿದರೂ ಭಾರತ ಮಿಲ್ಲಿನವರು ಈ ದೇಶಕ್ಕೆ ಬೇಕಾದಷ್ಟಂಲ್ಲಿ ಅರ್ಧಭಾಗ ತಯಾರು ಮಾಡಬಹುದು. ಯಾತಕ್ಕೆ ಈಗ ಒಟ್ಟಿ ಬೆಲೆ 100 ಕ್ಕೆ 500 ರಿಂದ 600 ರವರೆಗೆ ಏರಿದೆ. ಕೂಲಿಗಳ ಸಂಬಳ ಹೆಚ್ಚಿಸಿದೆ ಎನ್ನಬಹುದು? ಇದಕ್ಕೋಸ್ಕರ ಶೇಕಡ 500 ರಂತೆ ಒಟ್ಟಿ ಬೆಲೆ ಹೆಚ್ಚಿಸಬಹುದೆ! ಒಂಗಾಳಾ ಮಿಲ್ ಅಸೋಸಿಯೇಷನ್ನು 1942 ರಲ್ಲಿ ತಯಾರಾದದ್ದರಿಂದ 1943 ರಲ್ಲಿ ಎರಡರಷ್ಟು ತಯಾರು ಮಾಡುತ್ತೇವೆಂದು ಹೇಳಿದ್ದರು! ಸರ್ಕಾರದವರು ಹೆಚ್ಚಿಧಾರಣೆ ಕಮ್ಮಿ ಮಾಡಿಸ್ತೇವೆಂದು ಭರವಸೆ ಕೊಟ್ಟರು ಇಷ್ಟಾದರೂ ಇನ್ನೂ ಬಟ್ಟೆ ಧಾರಣೆ ಇಳಿದಿಲ್ಲ.

ಭಾರತದ ಕ್ಷಾಮ

ಈಗ ಭಾರತದಲ್ಲಿ ಪೌಂಡು 1 ಕ್ಕೆ ಒಂದು ಇಲ್ಲವೆ ಒಂದೂವರೆ ಆಣೆಗೆ ಸಿಗುತ್ತಿದ್ದ ಅಕ್ಕಿ ಮುಂಬಾಯಿನಲ್ಲಿ 12 ಆಣೆಯಾಗಿರುವುದನ್ನು ನೋಡಿ ಲಂಡನ್ ವರ್ತಮಾನ ಪತ್ರಿಕೆಯಾದ ಸ್ಟ್ಯಾಟ್ಸ್‌ಮನ್ ಮತ್ತು ನೇಷನ್ ಹೇಳುವುದು. ಭಾರದ ಕ್ಷಾಮವನ್ನು ಮನುಷ್ಯಮಾಡಿದ್ದು ಎಂದು. ಹಾಗಾದರೆ ದೇವರು ಮಾಡಿದ್ದಲ್ಲವೆಂದಾಯಿತು!

ನೋಟಿನ ಚಲಾವಣೆ

1942 ರ ಅಂತ್ಯದಲ್ಲಿ ಭಾರತದಲ್ಲಿ ಆಹಾರ ಬೆಲೆಯು ಶೇಕಡ 139 ಕ್ಕೆ ಏರಿತು. ಇಂಗ್ಲೆಂಡಿನಲ್ಲಿ ಶೇಕಡ 60 ರಷ್ಟು ಮಾತ್ರ ಹೆಚ್ಚಿತು. ಇಂಗ್ಲೆಂಡಿನಲ್ಲಿ ನೋಟುಗಳ ಚಲಾವಣೆ ಶೇಕಡ 72 ರಂತೆ ಹೆಚ್ಚಿತು. ಆದರೆ ಭಾರತದಲ್ಲಿ ಶೇಕಡ 390 ರಂತೆ ರಂತೆ ಹೆಚ್ಚಿತು.

ಜರ್ಮನ್ ದಳಪತಿಯ ಬಂಧನ

ಟುನಿಷಿಯಾವಲ್ಲಿ ಮಿತ್ರರಿಗೆ ಕೈಸೆರೆಯಾದ ಜರ್ಮನ್ ದಳಪತಿ ವಾನ್ ಆರ್ನಿಂನನ್ನು ಇಂಡ್ಲೆಂಡಿನ ಒಂದು ಭಾರಿ ಹೋಟಲಿನಲ್ಲಿ ಪ್ರತ್ಯೇಕವಾಗಿ ಇಟ್ಟಿರುತ್ತಾರೆ. ಇವರ ಸಂಗಡ ಮಾತ್ಯಾವ ಇಟಾಲಿಯನ್ ಅಧಿಕಾರಿಗಳೂ ಇಲ್ಲ.

ನ್ಯಾಯವಿಧಾಯಕ ಸಭೆ.

ಮೈಸೂರು ನ್ಯಾಯವಿಧಾಯಕ ಸಭೆಯ ಬಜೆಟ್ ಅಧಿವೇಶನವು ಬೆಂಗಳೂರು ಅಸ್ಥಾರಕ ಕಛೇರಿಯ ಸಭಾಮಂದಿರದಲ್ಲಿ ಈ ತಿಂಗಳು 21 ನೇ ತಾರೀಖಿನಿಂದ ನಡೆಯುವುದು.

Ranjit — — Satyabhama

ರಣಜಿತ್ ಟಾಕೀಸ್

2nd Week ಪೈ ವಿ ರಾವ್, ಪುಷ್ಪವಲ್ಲಿ ಪಾತ್ರವಹಿಸಿರುವ
ಸತ್ಯಭಾಮಾ [ತೆಲುಗು]

New Opera Talkies — Aryamala

ಪಿ. ಯು. ಚಿನ್ನಪ್ಪ, ಸರೋಜಿನಿ, ಸಂತಾನಲಕ್ಷ್ಮಿ, ಶಕುಂತಲ
ಕೃಷ್ಣ, ಮಧುರಂ ಮುಂತಾದವರು ಪಾತ್ರವಹಿಸಿರುವರು

ಆರ್ಯಮಾಲಾ
ಪೆಶ್ಶ
ರಾ
ತಮಿಳು ಚಿತ್ರ

5th Week
ನೇ ವಾರ

ಪ್ರಜಾಪ್ರತಿನಿಧಿ ಸಭೆ

(ನಮ್ಮ ಸ್ವಂತ ಪುದ್ವಿಗಾರರಿಂದ)

ಬೆಂಗಳೂರು ಜೂ॥ 10

9 ನೇ ದಿನದ ಪ್ರಜಾಪ್ರತಿನಿಧಿ ಸಭೆಯು ಇವತ್ತು ಬೆಳಿಗ್ಗೆ 8-30 ರಿಂದ 12 ಘಂಟೆಯವರಿಗೆ ರಾಜಮಂತ್ರಿ ಪ್ರವೀಣ ಆನಂತರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು

8 ಪ್ರಶ್ನೋತ್ತರಗಳು 1 ಘಂಟೆಕಾಲ ನಡೆದವು ಇವು ನೀರಾವರಿ ಕಾಮಗಾರಿ, ಕೆರೆ ಅಚ್ಚುಕಟ್ಟು, ಕ್ರಿಶ್ಚಿಯನ್ ವ್ಯವಸಾಯಸ್ಥರಿಗೆ ಜಮೀನು ಸಾಗುವಳಿಗೆ ಒಪ್ಪಿಗೆ ಸುವ ವಿಚಾರದಮೇಲೆ ನಡೆದವು.

ಮಿ॥ ಕೆ. ನಂಜುಂಡಯ್ಯನವರು ತಮ್ಮ ನಿರ್ಣಯವು ಒಟ್ಟಿ ಒದಗಿಸುವ ವಿಚಾರದಲ್ಲಿ ಮುಂದೆ ಆಹಾರ ವ್ಯವಸ್ಥೆ ಸರಬರಾಜು ಉಸಮಂತ್ರಿಗಳು ಮುಂದೆ ಸಭೆಯ ಮುಂದೆ ವಿವರಣೆ ಕೊಡುವರೆಗೂ ಭರವಸೆಯುವೇಲೆ ಹಿಂದಕ್ಕೆ ತೆಗೆದು ಕೊಂಡರು.

ರಾ॥ ಬ॥ ರಾವು ಸ್ವಾಮಿಯವರು ಗರ್ಭಿಣಿ ಮತ್ತು ಶಿಶುಸಂರಕ್ಷಣಾ ಸಮಿತಿಗೆ 1 ಲಕ್ಷ ರೂಪಾಯಿ ಒದಗಿಸಬೇಕೆಂದು ತಮ್ಮ ನಿರ್ಣಯವನ್ನು ಮಂಡಿಸಿ, ಯುಕ್ತಕಾರಣಗಳಿಂದ, ಶಿಶು ಮರಣ, ಗರ್ಭಿಣಿ ಸಂರಕ್ಷಣಾ ವಿಚಾರದಲ್ಲಿ ಕೇಂದ್ರ ಸಂಸ್ಥೆಯವರು ಕೊಟ್ಟಿರುವ ವರದಿಯನ್ನು ನಿರೂಪಿಸಿ ಸಂಖ್ಯಾತರಗಣನೆಯಿಂದ ವ್ಯಕ್ತಪಡಿಸಿ ವಾದಿಸಿದರು

ಆನಂತರ 50 ಲಕ್ಷ ರೂಪಾಯಿಗಳನ್ನು ಆಹಾರ ಸಾಮಗ್ರಿಯವನ್ನು ಒದಗಿಸುವ ವಿಚಾರದಲ್ಲಿ ಭೂಪಾಳಂ ಚಂದ್ರಶೇಖರಯ್ಯ ಮುಂತಾದವರು ಒತ್ತಿ ಮಾತಾಡಿದರು. ಹಾಹಾಕಾರವನ್ನು ಎತ್ತಿಹಿಡಿದರು ಮತ್ತು ಲಕ್ಷಾಂತರ ಹಣವನ್ನು ಖರ್ಚು ಮಾಡಿರುವ ಪ್ರಯುಕ್ತಸರಿಯಾದ ಆಡಿಟ್ ಮತ್ತು ಅಕೌಂಟ್ ಇಡಬೇಕೆಂದು ಒತ್ತಿ ಹೇಳಿದರು. ಪ್ರಜಾಪ್ರತಿನಿಧಿಸಭೆ, ನ್ಯಾಯವಿಧಾಯಕಸಭೆಯ ಸದಸ್ಯರನ್ನೂ ಸೇರಿಸಿ ಸಭೆನಡೆಸಬೇಕು ಎಂದರು.

ಇದಕ್ಕೆ ಉತ್ತರವಾಗಿ ಮಿ॥ ನಾರಾಯಣರಾಯರು, ನಾವು ಲಕ್ಷಾಂತರ ರೂಪಾಯಿ ಮುಂಗಡವಾಗಿ ಕೊಟ್ಟಿರುವುದು ನಿಜ. ಸ್ಟಾಂಡರ್ ಒಟ್ಟಿಗೆ 2 ಲಕ್ಷ ಮುಂಗಡ, ರೇಷ್ಮೆಗೆ ಲಕ್ಷ ಮುಂಗಡ ಕೊಟ್ಟಿದೆ ಜಿಲ್ಲಾ ಆಫೀಸರುಗಳ ಮತ್ತು ಡೈರೆಕ್ಟರ ಸ್ವಂತ ಜವಾಬುದಾರಿ ಲೆಕ್ಕಾಚಾರದ ವಿಚಾರದಲ್ಲಿದೆ. ಲೆಕ್ಕ ಇದೆ ಪ್ರತ್ಯೇಕ ಅಸಿಸ್ಟೆಂಟ್ ಕಂಟ್ರೋಲರನ್ನೂ ಮತ್ತು ಆಕೌಂಟೆಂಟರನ್ನೂ ಲೆಕ್ಕದ ತನಿಖೆಗೆ ಗೊತ್ತುಮಾಡಿದ್ದೇವೆ. ನಷ್ಟ ತಿಳಿಸುವುದಕ್ಕೆ ಈಗ ಆಗುವುದಿಲ್ಲಾ, ಈಗ ಬೆಂಗಳೂರು ಜಿಲ್ಲಾದ ಲೆಕ್ಕದ ವಿಚಾರವಾಗುತ್ತಿದೆ. ಆನಂತರ ಇತರ ಕಚೇರಿಗಳಿಗೂ ಏರ್ಪಾಡು ಮಾಡುತ್ತೇನೆ. ಬೀಜವಾಡಕ್ಕೆ ಅಕ್ಕಿಗೆ ಮುಂಗಡ ಕೊಟ್ಟು ತರಿಸಿದೆವು ಈಗ ಅಲ್ಲಿಂದ ಬರುವುದು ನಿಂತಿದೆ. 18,25,000 ರೂಪಾಯಿ ಸಿವಿಲ್ ಸಪ್ಲೈಗೂ ವಿಮಾನಧಾಳಿ ಪ್ರತಿಬಂಧಕದ ಒಗ್ಗೆಗೂ ವ್ಯಯ ಮಾಡಿದೆ.

ದಿವಾನರೂ ಈ ವಿಷಯದಲ್ಲಿ ಯುಕ್ತಯುಕ್ತವಾಗಿ ಮಾತನಾಡಿದರು.

ಇದಾದನಂತರ ಶ್ರೀ ಶ್ರೀನಿವಾಸರವರು ಭಾಷಣ ಮಾಡಿದರು.

—ಅವಸರದ ತರಾವು ಮುದ್ದಜೋಯಿ ತು—

ಶ್ರೀ ಭೂಪಾಳಂ ಚಂದ್ರಶೇಖರಯ್ಯ ಮುಂತಾದವರು ರೇಷ್ಮೆ ಗೂಡಿನ ಮೇಲೆ ಹಾಕಿರುವ ಸುಂಕದಿಂದ ಜರಕದಿಂದ ಜೀವನ ಮಾಡುವ ಒಡಜೀವಿಗಳಿಗೆ ಬಹಳ ತೊಂದರೆ ಆದ್ದರಿಂದ ಈ ಅವಸರದ ತರಾವನ್ನು ಈ ಸಭೆಯ ಮುಂದೆ ಚರ್ಚಿಸಬೇಕೆಂದೂ ; ಮತ್ತು ಶ್ರೀ ಭೂಪಾಳಂ ಚಂದ್ರಶೇಖರಯ್ಯನವರು ತಂದಿದ್ದ ಕೋಲಾರದ ಚಿನ್ನದಗಣಿ, ಕೋಲಾರದ ಪ್ರದೇಶಗಳಿಗೆ ಹೋಗಿ ಬರಲು ಕೆಲವು ರಾಷ್ಟ್ರೀಯ ಸಭೆಯ ಸದಸ್ಯರಿಗೆ ಅವಕಾಶ ಕೊಡಬೇಕೆಂಬವದನ್ನು ಚರ್ಚಿಸಬೇಕೆಂಬ ಅವಸರದ ತರಾವನ್ನು ದಿವಾನರು, ಇವು ಗಣ ಪಾರ್ಲಿಮೆಂಟರಿ ಸ್ಟಿಡವಳಿಕೆಗಳಿಗೆ ವಿರೋಧವಾಗಿವೆ. ಒಬ್ಬ ನ್ಯಾಯಾಧೀಶರಾಗಲೀ, ಮ್ಯಾಜಿಸ್ಟ್ರೇಟರಾಗಲಿ ಅಥವಾ ಜ್ಯುಡಿಷಿಯಲ್ ಇಲಾಖೆಯು ತೀರ್ಪನ್ನು ಇಲ್ಲಿ ಚರ್ಚಿಸುವುದು ನ್ಯಾಯಬಾಹಿರವಾದುದೆಂದು ತಳ್ಳಿಹಾಕಿದರು.

❀

ತಿರುನೆಲ್ವೇಲಿ ಗುಡ್ಡಪಟ್ಟಿಯಲ್ಲಿ ಗಾಯಗೊಂಡವನಿಗೆ ಚಿಕಿತ್ಸೆ ಸಾಯಲಾಗಿಲ್ಲವೆಂದು ನಿಲುವಳಿ ಸೂಚನೆಗೆ ದಿವಾನರು ಅನುಮತಿಕೊಡದೆ ಹೈಲ್ತ್ ಆಫೀಸರೂ ಆಸ್ಪತ್ರೆಯವರು ರೋಗಿಗಳನ್ನು ಸರಿಯಾಗಿ ನೋಡಿಕೊಳ್ಳುತ್ತಿರುವುದೆಂದರು. ಪಬ್ಲಿಕ್ ಸರ್ವೀಸ್ ಕಮಿಷನರನ್ನು ನೇಮಿಸಿದಾಗ ಹರಿಜನರ ಪ್ರಾತಿನಿಧ್ಯವನ್ನು ಗಣನೆಗೆ ತೆಗೆದುಕೊಳ್ಳಲಿಲ್ಲವೆಂಬ ನಿಲುವಳಿ ಸೂಚನೆಯನ್ನು ಸಹ ದಿವಾನರು ತಳ್ಳಿಹಾಕಿದರು. ಸಂಸ್ಥಾನದಲ್ಲಿ ವರ್ಷಕ್ಕೆ 30 ಲಕ್ಷ ಪಲ್ಲಾಅಕ್ಕಿಬೇಕಾಗುತ್ತೆಂದೂ 3.7 ಅಕ್ಕಿ ಗಿರಣಿಗಳು ಇವೆಯೆಂದು ಒಂದು ಪ್ರಶ್ನೆಗೆ ಉತ್ತರ ಒಂತು. ತುಮಕೂರ ತಾಲ್ಲೂಕಿನಲ್ಲಿ 17900 ರೂ ರಾಗಿಕೊಂಡು 1108 ಮೂಟೆ ರಾಗಿಯನ್ನು ವಾರಿದೆಂದೂ ಇಲ್ಲಿ ಸಾಕಾಗುವಷ್ಟು ಭತ್ತ ಬೆಳೆಯುವುದಿಲ್ಲವೆಂದು ಇನ್ನೊಬ್ಬ ಸದಸ್ಯರ ಪ್ರಶ್ನೆಗೆ ಉತ್ತರ ಬಂತು.

ಶ್ರೀ॥ ನವರತ್ನ ರಾವುರಾಯರು ಕಂದಾಯ ನೀತಿ ಪುನರ್ವಿಮರ್ಶಿಸಬೇಕು ವ್ಯವಸಾಯಕ್ಕೆ ಸಹಾಯ ಉಪಾಧ್ಯಾಯರ ಸಂಬಳ ಹೆಚ್ಚಿಸಬೇಕು ಸ್ಟಾಂಡರ್ಡ್ ಒಟ್ಟಿ ಯೋಜನೆಮಾಡಬೇಕೆಂದರು. ಶ್ರೀ ಸೀತಾರಾವು ಶಾಸ್ತ್ರಿಗಳು ಖಾಸಗಿ ವಹಿವಾಟುಗಳನ್ನು ಲೇಬರ್ ಕಮಿಷನರಾಗಿ ನೋಡಬೇಕೆಂದರು, ಕಾಂಗ್ರೆಸ್ ಗೇಶರನ್ನು ಬಿಡುಗಡೆ ಮಾಡಬೇಕೆಂದರು. ಶ್ರೀಮತಿ ವೀರಮ್ಮನವರು ಪ್ರತಿಕೋಮಿಗೂ ಜನಸಂಖ್ಯೆ ಮೇಲೆ ನೌಕರಿ ಹಂಚಬೇಕೆಂದರು. ಶ್ರೀ॥ ಶಾಂಪೂರ್ ವಾಪಣ್ಣನವರು ಆರೋಗ್ಯಶಾಖೆಗೆ ಹೆಚ್ಚು ಹಣ ಕೊಡಬೇಕೆಂದರು ಶ್ರೀ॥ ವೆಂಕಟಸ್ವಾಮಿ ಶೆಟ್ಟರು ಒಕ್ಕಾಯದಿಂದ ಎಲ್ಲರಿಗೂ ಅಕ್ಷರ ಶಿಕ್ಷೆಯಾಗಬೇಕೆಂದರು. ಮಿ॥ ಮಿರ್ಜಾರವರು ಸೌದೆ 1 ರೂಗೆ 2 ಮಣ ಇಜ್ಜಲು 1 ಮೂಟೆಗೆ 4 ರೂ. ಇದರ ತೊಂದರೆ ತಪ್ಪಿಸಬೇಕೆಂದರು. ಶ್ರೀ॥ ನಾಡಿಗ ನಂಜುಸ್ವಾಮಯ್ಯನವರು 250 ರೂಪಾಯಿ ಕಮ್ಮಿ ಇರುವವರಿಗೆ ತುಟ್ಟಿಭತ್ಯ ಕೊಡಬೇಕೆಂದರು. ಮಿ॥ ವಲಿಯುಲ್ಲಾರವರು ಪ್ರತಿಯೊಂದು ಕೋಮಿಗೂ ಪ್ರಜಾಸಂಖ್ಯೆಗನುಗುಣವಾಗಿ ಸರ್ಕಾರಿ ನೌಕರಿ ಕೊಡಬೇಕೆಂಬ ನೀತಿ ಒಳ್ಳೆದಲ್ಲವೆಂದರು ಶ್ರೀ॥ ಕೆ. ಸಿ. ಸುಬ್ಬಣ್ಣನವರು ಹೈಕೋರ್ಟಿನ ಕೇಸಿನ ನಡುವಳಿಕೆಯನ್ನು ವಜಾ ಮಾಡುವುದನ್ನು ತಪ್ಪಿಸಿ ಟೈಪ್‌ಮಾಡಿಸುವ ಪದ್ಧತಿ ಜಾರಿಗೆ ತರಬೇಕೆಂದರು.

ಆಲ್ಜೀರಿಯಾದಲ್ಲಿ ಜನರಲ್ ಡಿಗಾಲ್ ಮಾತನಾಡುತ್ತಾ ಇತರರ ಸಹಾಯದಿಂದ ಫ್ರಾನ್ಸ್ ಬಿಡಗಡೆಯಾಗಬೇಕಾದ್ದಿಲ್ಲ, ಆದೂ ಫ್ರಾನ್ಸ್‌ನ ಮುಖ್ಯ ಸ್ನೇಹಿತರಿಂದ ಫ್ರಾನ್ಸ್‌ಗೆ ಧನಸಹಾಯ ಬೇಡ ಇತರ ಸಹಾಯವಿಲ್ಲದೆ ನಾವು ನಮ್ಮ ರಾಜ್ಯವನ್ನು ಗೆಲ್ಲುತ್ತೇವೆ. ಮಾರ್ಷಲ್‌ಪಿಟೇನ್ ವಿಷಯವಾಗಿ ಇವರು ಗುರುಭಾವನೆಯಿಂದ ಮಾತನಾಡುವರೆಂದು ತಿಳಿದಿರ್ವುದು. ಫ್ರೆಂಚ್ ಜನರಿಗೆ ತಾವು ಏನು ಮಾಡಬೇಕೋ ಅದು ಗೊತ್ತಿದೆ ಎಂದರು ಅಲ್‌ಜೀರಿಯಾದಲ್ಲಿ ಫ್ರೆಂಚರ ಮೊದಲನೆ ಏಟಿಂಗ್ ನಡೆಯಿತು. ಜನರಲ್ ಡಿಗಾಲ್ ಜಿರೋ ಭಾಗವಹಿಸಿದ್ದನು.

For good printing
Saraswati Printing Press
Lansdowne Buildings, Mysore

Lakshminarasimha Press
Srirampet, Mysore

Edited, Printed & published by M. S. Krishna Rao, at the Satyavadi Press, Chamaraja Agrahar, Mysore.

ಅಕ್ಷಿಧಾರಾ

ಸೇವನೆಯಿಂದ ರಕ್ತಕೊರತೆ, ಮಲಬಂಧ, ನರಗಳ ಅಶಕ್ತತೆ, ದೌರ್ಬಲ್ಯ, ನಿದ್ರಾಭಂಗ ನಿವಾರಣೆಯಾಗಿ, ಸಂಸಾರಸುಖಕ್ಕೆ ಅವಶ್ಯವಿರುವ ಶಕ್ತಿ ಲಭಿಸುವದು

ಅನೇಕರಿಂದ ಪ್ರಶಂಸಿಸಲ್ಪಟ್ಟಿದೆ. ಪಸ್ತುಪ್ರದರ್ಶನಗಳಲ್ಲಿ ಪ್ರಾಶಸ್ತ್ಯವನ್ನು ಪಡೆದಿದೆ. ಬೆಲೆ 1 ರೂಪಾಯಿ